Elections to Grampanchayats

*Q.—229. Sri S. S. SHETTER (Hubli).—

Will the Minister for Development and Co-operation be pleased to state :—

The reasons for not conducting the elections to Grampanchayats as the General Elections are over ?

A.—Sri P. M. NADGOUDA (Minister for Development and Co-operation).—

In view of the Mysore Local Authorities (Postponement of Elections and Continuance of Administrators) Act, 1965, elections to Local Bodies were postponee till the end of the Emergency. After the Emergency is lifted by Government of India, action will be taken to conduct elections.

ಶ್ರೀ ಎಸ್. ಎಸ್. ಶೆಟ್ಟರ್.—ಮಾನ್ಯ ಮಂತ್ರಿಗಳು 1965ನೇ ಇಸವಿಯ ಮೈಸೂರು ರಾಜ್ಯದ ಸ್ಥಳೀಯ ಸಂಸ್ಥೆಗಳು ಅಕ್ಟೋಬರ್‌ಗೆ ಒಂದು ಅಮೆಂಡ್‌ಮೆಂಟ್ ತಂದು ಎಲೆಕ್ಷನ್ ಮಾಡಬೇಕು ಎಂದು ನರ್ಕಾರ ಇಟ್ಟುಕೊಂಡಿದ್ದೀರಾ ?

†ಶ್ರೀ ಪಿ. ಎಂ. ನಾಡಗೌಡ.—ಪಂಚಾಯಿತಿ ಬಗ್ಗೆ ಹೇಳುವುದಾದರೆ, ಈಗಾಗಲೇ ನರ್ಕಾರದ ಪರು ಜನವರಿ, ಫೆಬ್ರುವರಿಯಲ್ಲಿ ಎಲೆಕ್ಷನ್ ಮಾಡಬೇಕು ಎಂದು ಮಾಡಿದ್ದೇವೆ. ಅದನ್ನು ಬದರಾವಣೆ ಮಾಡುವ ನಲುವಾಗಿ ತರಾವು ಆಗಿಲ್ಲ. ಇನ್ನೊಂದು ಪ್ರಶ್ನೆಯೂ ಕೂಡ ಅಡಕವಾಗಿದೆ. ಈ ಮನೆಯು ಮುಂದೆ ಬಂದು ಪಂಚಾಯಿತಿ ರಾಜ್ಯ ಬಿಲ್ಲು ಇವೆ. ಕೊಂಡಜ್ಜಿ ರಿಪೋರ್ಟ್ ಪ್ರಕಾರ ಶೀಘ್ರವಾಗಿ ವಿಚಾರ ಮಾಡಿದ ಮೇಲೆ ತಾಲ್ಲೂಕ್ ಬೋರ್ಡ್ ಎಲೆಕ್ಷನ್ ಮಾಡಬೇಕಾಗುತ್ತದೆ.

ಶ್ರೀ ಅಬೀಬ್ ಸೇಟ್.—ಎರಡು ಪ್ರಶ್ನೆ ಕಂಡು ಬರುತ್ತದೆ. ಶ್ರೀ ಕೊಂಡಜ್ಜಿ ಬನಪ್ಪನವರ ರಿಪೋರ್ಟ್‌ಚರ್ಚೆ ಮಾಡಿ ಪಾಸಾದ ನಂತರ ಪಂಚಾಯಿತಿ ತಾಲ್ಲೂಕ್ ಬೋರ್ಡ್ ಎಲೆಕ್ಷನ್ ಯೋಚನೆ ಮಾಡೋಣ, ಎಂದು ಒಂದುನೆಯದು. ಇನ್ನೊಂದು ಎಮರ್ಜೆನ್ಸಿ ಇರುವುದರಿಂದ ಎಲೆಕ್ಷನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ತಾಲೂಕ್‌ಬೋರ್ಡ್ ಮತ್ತು ಪಂಚಾಯಿತಿ ಎಲೆಕ್ಷನ್ ವಿಚಾರದಲ್ಲಿ ಈ ಮನೆಯಿಂದ ಕಾನೂನು ಆಗಿದೆಯೇ ? ಅಥವಾ ಸೆಂಟ್ರಲ್ ಗೌರ್ನಮೆಂಟ್ ಕಾನೂನು ಆಗಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಈ ಮನೆಯಿಂದ ಕಾನೂನು ಆಗಿದೆ.

ಶ್ರೀ ಎಸ್. ಶಿವಪ್ಪ.—ಕೊಂಡಜ್ಜಿ ಬನಪ್ಪ ಸಮಿತಿ ರಿಪೋರ್ಟ್ ಆಧಾರದ ಮೇಲೆ ಬಿಲ್ ಪಾಸಾದ ಮೇಲೆ ತಾಲೂಕ್‌ಬೋರ್ಡ್ ಚುನಾವಣೆ ವಿಚಾರ ಆಲೋಚನೆ ಮಾಡುತ್ತೇವೆ. ಅದಕ್ಕಿಂತ ಮುಂಚೆ ಪಂಚಾಯಿತಿ ಚುನಾವಣೆಗಳಿಗೆ ಜನವರಿಯಲ್ಲಿ ಅವಕಾಶ ಮಾಡುತ್ತೇವೆ ಎಂದು ಹೇಳುತ್ತೀರಿ. ಪಂಚಾಯಿತಿ ಮತ್ತು ಲೋಕಲ್‌ಬೋರ್ಡ್ ಎರಡು ಒಂದೇ, ಪಂಚಾಯತ್ ರಾಜ್ಯದಲ್ಲಿ ಇರುವುದು ಅಲ್ಲವೇ ? ಒಂದಕ್ಕೊಂದಕ್ಕೆ ಭೇದ ಏತಕ್ಕೆ ಕಲ್ಪಿಸುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಪಂಚಾಯತ್ ರಾಜ್ಯದಲ್ಲಿ ಒಂದು ಹೊಸ ಬಿಲ್ ಇದೆ. ಹಾಗೆಯೇ ತಾಲ್ಲೂಕ್‌ಬೋರ್ಡ್ ಕಾಂಸ್ಟಿಟ್ಯೂಷನ್ ಮಾಡುವ ವಿಚಾರ ತೀರ್ಮಾನ ಆಗದೇ ಹೋದರೆ ಚುನಾವಣೆ ಮಾಡುವ ಹಾಗಿಲ್ಲ.

Sri MANIK RAO SHAM RAO.—I would like to know from the Government whether the emergency clause is applicable to Mysore State only or other States in the country also.

ಶ್ರೀ ಪಿ. ಎಂ. ನಾಡಗೌಡ.—ಎಲ್ಲಾ ರಾಜ್ಯಗಳಿಗೂ ಸಂಬಂಧ ಇದೆ.

Sri MANIK RAO SHAM RAO.—Then how can elections be held in Maharashtra State ?

Sri P. M. NADGOUDA.—I am not aware of other States. I am aware of our State only.

Mr. SPEAKER.—How can this Government answer for Maharashtra?

Sri MANIK RAO SHAM RAO.—Elections are being held in Maharashtra. I wanted to know whether the Government are aware of it.

Mr. SPEAKER.—I would have disallowed the question because the member knows the information already.

Sri B. B. SAYANAK.—Is it a fact that the Home Minister stated in Parliament that emergency is strictly applicable to border areas ?

Sri P. M. NADGOUDA.—I am not aware of that.

Sri AZEEZ SAIT.—What shame it is, Sir ? What the Government of India says in the Loka Sabha, the Hon'ble Minister says that he does not know.

Sri H. SIDDAVEERAPPA.—The Minister does not disclose answer under supplementaries, but he conceals the answers.

Mr. SPEAKER.—All this has been read in the newspapers.

Sri H. SIDDAVEERAPPA.—The Emergency has a different purpose as can be seen under the Act that has been enacted. It is nowhere said that elections to local bodies should not be held as it would break the heads of the people. It is the imagination of our friends.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಮರ್ಜೆನ್ಸಿ ಇರುವಾಗಲೇ ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಈ ಸ್ಥಾನಿಕ ಚುನಾವಣೆಗಳು ಜರಗಿದ್ದು ಮೈಸೂರು ರಾಜ್ಯದಲ್ಲಿ ಚುನಾವಣೆಗಳನ್ನು ಹಿಂದಕ್ಕೆ ಹಾಕಲು ಕಾರಣ ಕಾಂಗ್ರೆಸ್ ಸಂಸ್ಥೆಯ ಹಿಡಿತ ಆ ಸಂಸ್ಥೆಗಳಲ್ಲಿ ತಪ್ಪಿಹೋಗುತ್ತದೆ, ತಾಲ್ಲೂಕು ಬೋರ್ಡುಗಳಲ್ಲಿ ಬೇರೆ ಪಾರ್ಟಿಯವರು ಆಡಳಿತಕ್ಕೆ ಬರುತ್ತಾರೆಂದು ಉದ್ದೇಶದಿಂದ ಅಲ್ಲವೇ, ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಅದು ತಮ್ಮ ಅಭಿಪ್ರಾಯ.

ಶ್ರೀ ಎಸ್. ಎಸ್. ಶೆಟ್ಟರ್.—ಇದಕ್ಕೆ ಕೊಂಡಜ್ಜಿ ಬಸಪ್ಪನವರ ರಿಪೋರ್ಟು ಪ್ರಕಾರ ಏನು ಕಾರಣ ?

ಶ್ರೀ ಪಿ. ಎಂ. ನಾಡಗೌಡ.—ವಿಧೇಯಕ ತಯಾರಾಗಿದೆ. ಅದನ್ನು ಮೊನ್ನೆ ತಾನೆ ರಾಜ್ಯ ಪಾಲರು ತಮ್ಮ ಭಾಷಣದಲ್ಲಿ ಈ ಮನೆಯೊಳಗೆ ಒದಿದ್ದಾರೆ. ಈಗಾಗಲೇ ಸರ್ಕಾರ ಶೀಘ್ರ ಕ್ರಮ ತೆಗೆದುಕೊಂಡು ವಿಚಾರಮಾಡುತ್ತಿದ್ದಾರೆ.

Sri K. H. PATIL.—Will the Hon'ble Minister please state whether the Government has conducted elections to other local authorities like the marketing societies and market committees while the emergency is continuing and what is the difficulty for Government to conduct elections to taluk development Boards ? Is it out of fear that their henchmen may not be returned to those bodies ?

Sri P. M. NADGOUDA.—It is absolutely baseless.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ ಈಗತಾನೆ ತಾವು ಅಪ್ಪಣೆ ಕೊಡಿಸಿದಿರಿ, ಕೊಂಡಜ್ಜಿ ಬಸಪ್ಪನವರ ರಿಪೋರ್ಟು ಅವಗಾಹನೆಗೆ ತೆಗೆದುಕೊಂಡಮೇಲೆ ಚುನಾವಣೆ ಮಾಡಿಸುತ್ತೇವೆಂದು. ಕೊಂಡಜ್ಜಿ ಬಸಪ್ಪನವರ ರಿಪೋರ್ಟಿನಲ್ಲಿ ಎಲ್ಲೆಲ್ಲಿ ವಿರೇಪ್ ಪಂಚಾಯ್ತಿಗಳು ಯಾವ ಯಾವ ರೀತಿ

ಇರಬೇಕು, ಆ ರೀತಿ ಇದ್ದಮೇಲೆ, ಆಗತಾನೆ ತಾಲ್ಲೂಕು ಬೋರ್ಡು ಅಂಗರಚನೆಗೆ ಬರುವುದು. ಅಂದಮೇಲೆ ತಾಲ್ಲೂಕು ಬೋರ್ಡು, ವಿಲೇಜ್ ಪಂಚಾಯ್ತಿಗಳ ರೂಪರೇಷೆಗಳು, ಹೇಗಿರಬೇಕು, ಅವು ಗ್ರೂಪ್ ಆಗಿರಬೇಕೇ, 500 ಜನಸಂಖ್ಯೆ ಇದ್ದರೆ ಅದನ್ನು ಪ್ರತ್ಯೇಕವಾಗಿ ಇಡಬೇಕೇ, ಹೇಗಿರ ಬೇಕೆಂದು ಎಲ್ಲಾ ಇದೆ. ಈಗ ನೀವು ಎಲ್ಲಾ ಸೇರಿ ರಾಜಕೀಯ ಪಕ್ಷಗಳು ಸೇರಿ ಯಾವ ಯಾವ ಹಳ್ಳಿಗಳನ್ನು ಸೇರಿಸುವುದರಿಂದ ಅನುಕೂಲವಾಗುತ್ತದೆ ಎಂಬುದನ್ನೆಲ್ಲಾ ಮುಖ್ಯ ದೃಷ್ಟಿಯಲ್ಲಿಟ್ಟು ಕೊಂಡು, ಇದನ್ನು ಈಗ ಗ್ರೂಪ್ ಆಗಿ ಮಾಡಿದ್ದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಜನರಿಂದ ಏನಾದರೂ ಆಕ್ಷೇಪಣೆ ಬಂದರೆ, ಅವುಗಳನ್ನು ವಿಚಾರಣೆ ಮಾಡಲು ಡಿವಿಜನರ್ ಕಮೀಶನರುಗಳಿಗೆ ಕೊಡುತ್ತೀರಾ ? ಅಥವಾ 500 ಕ್ಕಿಂತ ಜನಸಂಖ್ಯೆ ಮೇಲೆ ಇದ್ದರೆ, ಪ್ರತ್ಯೇಕವಾಗಿ ಅವರು ತಮಗೆ ತಿಳಿಸಿದರೆ, ಅದೇ ರೀತಿ ಅವರು ಇರಲಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಪಂಚಾಯತಿಗೆ ಕೊಡುವುದಾಗಲಿ, ಅದರ ಬಗ್ಗೆ ಪರಾಮರ್ಶಿಸುವುದಕ್ಕಾಗಲೀ, ಸರ್ಕಾರ ಪೂರ್ಣ ಅಧಿಕಾರವನ್ನು ಡಿವಿಜನಲ್ ಕಮೀಶನರ್ಸ್‌ಗೆ ಈಗಾಗಲೇ ಕೊಟ್ಟಿದ್ದಾರೆ. ಮೂರು ಡಿವಿಜನಲ್ ಕಮೀಶನರ್ಸ್ ಈಗಾಗಲೇ ನೋಟಿಫೈ ಮಾಡಿ, ಶೋಕಾಸ್ ನೋಟೀಸ್ ಕೊಡುತ್ತಿದ್ದಾರೆ. ಇಂಥ ವಿಷಯದಲ್ಲಿ ಸರ್ಕಾರ ಏನು ಮಾಡುವುದಕ್ಕೂ ಬರುವುದಿಲ್ಲ. ಸರ್ಕಾರ ಪೂರ್ಣವಾದ ಅಧಿಕಾರ ಕೊಟ್ಟ ಮೇಲೆ, ಸರ್ಕಾರ ಇದರೊಳಗೆ ಇಂಟರ್‌ಫಿಯರ್ ಮಾಡುವುದಕ್ಕೆ ಬರುತ್ತದೆ ಎಂದು ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಬಹುದು. ಸರ್ಕಾರ ಒಮ್ಮೆ ಅಧಿಕಾರ ಕೊಟ್ಟಮೇಲೆ ಪ್ರವೇಶ ಮಾಡಬಾರದು ಎಂದು ನಿಯಮವಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯಸೊಗಿ.—ಈ ವಿಚಾರದಲ್ಲಿ ಶ್ರೀ ಕೊಂಡಜ್ಜಿ ಬಸಪ್ಪನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಮೇಲೆ ಒಂದು ಮುನೂದೆಯನ್ನು ಈ ಸಭೆಯ ಮುಂದೆ ತರುವ ವಿಚಾರವೇನಾದರೂ ಇದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಸರ್ಕಾರದ ಮುಂದೆ ಇದೆ. ಅದು ಲ್ಯಾಪ್ಸ್ ಆಗಿತ್ತು. ಅದು ಲ್ಯಾಪ್ಸ್ ಆಗದಂತೆ ಗೌರ್ನರ್ ಅವರು ತೆಗೆದುಕೊಂಡಿದ್ದಾರೆ.

Sri C. K. RAJAIAH SHETTY.—It appears that there was a decision in the Cabinet to the effect that the Panchayat elections should be held somewhere in the middle of January next year. Is it a fact ?

ಶ್ರೀ ಪಿ. ಎಂ. ನಾಡಗೌಡ.—ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಚುನಾವಣೆ ಮಾಡ ಬೇಕೆಂದು ಸಂಬಂಧಪಟ್ಟ ಇಲಾಖೆಗಳಿಗೆ ಡೈರೆಕ್ಷನ್ ಕೊಟ್ಟಿದ್ದೇವೆ.

ಶ್ರೀ ಎಸ್. ಎಸ್. ಶೆಟ್ಟರ್.—ಈಗ ಪಂಚಾಯತಿ ಮತ್ತು ತಾಲ್ಲೂಕ್ ಡೆವಲಪ್‌ಮೆಂಟ್ ಎಲೆಕ್ಷನ್ ಆಗಲಿಕ್ಕೆ ಕಾಯಿದೆ ಆತಂಕ ಇದೆಯೇ ಹೊರತು, ವ್ಯವಹಾರಿಕವಾದ ಆತಂಕ ಏನೂ ಇಲ್ಲ ಅಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಪ್ರಾಕ್ಟಿಕಲ್ ಡಿಫಿಕಲ್ಟಿ ಎಂದರೆ ದೇಶದ ಪರಿಸ್ಥಿತಿ ಅಷ್ಟು ಚನ್ನಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ತಾವು ಈಗ ಅಪ್ಪಣೆ ಕೊಡಿಸಿದಿರಿ, ಡಿವಿಜನಲ್ ಕಮೀಷನರ್‌ಗೆ ಪೂರ್ಣ ಅಧಿಕಾರ ಕೊಟ್ಟಿದ್ದೇವೆಂದು. ಇವರಿಗೆ ಪೂರ್ಣ ಅಧಿಕಾರ ಕೊಟ್ಟರೆ, ಅದರಲ್ಲಿ ಏನಾದರೂ ತಪ್ಪುಗಳು ಇದ್ದರೆ ತಿದ್ದಲಿಕ್ಕೆ, as the ultimate repository of power in that portfolio, ಅವಕಾಶ ಇಲ್ಲ, ಅಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿ ಏನೂ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಏನೂ ಇಲ್ಲದಿದ್ದರೆ, ಗ್ರೂಪಿಂಗ್ ಮಾಡುವುದರಲ್ಲಿ ಜನ ಗಳು ತಕ್ಷಣವಾಗಿ ತೀವ್ರವಾಗಿ ಯೋಚನೆ ಮಾಡಿ, ಅದನ್ನು ಸರಿಪಡಿಸಲಿಕ್ಕೆ ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಅವಕಾಶ ಮಾಡಿಕೊಡುತ್ತೇವೆ.

Mr. SPEAKER.—For three questions, we have spent half-an hour.

ಶ್ರೀ ಎಸ್. ಗೋಪಾಲಗೌಡ.—ತಾಲ್ಲೂಕ್ ಮಂಡಲಗಳು ಮತ್ತು ಪಂಚಾಯಿತಿಗಳಿಗೆ ಚುನಾವಣೆ ನಡೆಸುವುದಕ್ಕೆ ತುರ್ತುಪರಿಸ್ಥಿತಿ ಅಡ್ಡಿಯಾಗಿದೆಯೇ ಅಥವಾ ಅದಕ್ಕೆ ಏನಾದರೂ ಕಾಯಿದೆ ಇದೆಯೇ ಎಂಬುದನ್ನು ಸ್ಪಷ್ಟಪಡಿಸಲಿಲ್ಲ.

Mr. SPEAKER.—In answer to Question 229, it is said: "In view of the Mysore Local Authorities (Postponement of Elections and Continuance of Administrators) Act, 1965, elections to Local Bodies were postponed till the end of the Emergency".

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಈಗಾಗಲೇ ಚುನಾವಣೆಗಳು ನಡೆಯಬೇಕಾಗಿತ್ತು. ಎರಡು ವರ್ಷ ಮುಗಿದುಹೋಗಿದೆ. ತಮಗೆ ಸಾಧ್ಯವಿಲ್ಲದೇ ಹೋದರೆ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳನ್ನು ಕೂಡಲೆ ರದ್ದುಪಡಿಸುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಪಿ. ಎಂ. ನಾಡಗೌಡ.—ಈ ಸೂಚನೆ ಅಷ್ಟು ಉಚಿತವಲ್ಲ.

ಶ್ರೀ ಎಸ್. ಶಿವಪ್ಪ.—ತಾಲ್ಲೂಕ್ ಬೋರ್ಡ್ ಕಾನೂನು ಪ್ರಕಾರ 4 ವರ್ಷಗಳು ಇರುತ್ತವೆ. ಈ ನಾಲ್ಕು ವರ್ಷಕ್ಕೆ ಅಲ್ಲಿಯ ಜನರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುತ್ತಾರೆ. ಈಗ ನಾಲ್ಕು ವರ್ಷ ಮುಗಿದು ಹೋಗಿದೆ. ಈಗ ಎಂಟು ವರ್ಷವಾಗುತ್ತಿದೆ. ಇದು ಯಾವ ಪ್ರಜಾ ಪ್ರಭುತ್ವದ ನಿಯಮ ಎಂಬುದನ್ನು ದಯವಿಟ್ಟು ಸಭೆಗೆ ತಿಳಿಸುತ್ತೀರಾ? ದೇಶದಲ್ಲಿ ತುರ್ತು ಪರಿಸ್ಥಿತಿ ಇದೆಯೆಂದು ಹೇಳುತ್ತೀರಾ, ಮಹಾಚುನಾವಣೆಗಳನ್ನು ನಡೆಸಿದ ಮೇಲೆ ಇದನ್ನು ಏತಕ್ಕೆ ನಡೆಸಬಾರದು?

ಶ್ರೀ ಪಿ. ಎಂ. ನಾಡಗೌಡ.—ನಾಲ್ಕು ವರ್ಷಗಳು ಎಂದು ಹೇಳಿಲ್ಲ. ಇದು ಸರ್ವಸಾಮಾನ್ಯವಾದ ಮಾತು. ಮೊದಲು ಎರಡು ವರ್ಷ ಮುಂದೆ ಹಾಕಿತು. ಅಷ್ಟರಲ್ಲಿ ಒಂದು ಹೊಸ ಕಾಯಿದೆ ಬಂದು ಇದರ ಚುನಾವಣೆಗಳನ್ನು ಒಂದು ವರ್ಷ ಮತ್ತೆ ಮುಂದು ಹಾಕಿತು. ತುರ್ತುಪರಿಸ್ಥಿತಿ ಬಂದ ಮೇಲೆ 7 ವರ್ಷ ಮುಂದೆ ಹೋದಂತೆ ಆಗಿದೆ. ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಸ್ಥಾನೀಕ ಸಂಸ್ಥೆಗಳೇ ಇರಬೇಕೆಂದು ಅಭಿಪ್ರಾಯವಾಗಿದೆ.

ಶ್ರೀ ಕೆ. ಎಚ್. ನಂಜೇಗೌಡ.—ಮಾನ್ಯ ಮಂತ್ರಿಗಳು 71 ಮತ್ತು 229 ನೇ ಪ್ರಶ್ನೆಗಳಿಗೆ ಉತ್ತರವಾಗಿ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಈಗ ಮಂತ್ರಿಗಳು ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡುಗಳ ಚುನಾವಣೆಯನ್ನು ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ನಡೆಸುವಂತೆ ಸೂಚನೆ ಕೊಟ್ಟಿದ್ದೇವೆಂದು ಹೇಳಿದರು. ಇದು ಅಲ್ಲದೆ ಮತ್ತೇನಾದರೂ ವಿಶೇಷವಾದ ಕಾರಣಗಳು ಇದೆಯೇ?

ಶ್ರೀ ಪಿ. ಎಂ. ನಾಡಗೌಡ.—ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಅವರು ಉತ್ತರ ಹೇಳಿದ್ದೇನೆಂದರೆ, ನೀವು ಮುಂದಿನ ಪ್ರಶ್ನೆ ಎಂದು ಹೇಳುತ್ತೀರಿ. ಅವರು ಏನು ಉತ್ತರ ಹೇಳಿದ್ದಾರೆ?

12-30 P.M.

ಅಧ್ಯಕ್ಷರು.—ಅವರು ಏನು ಉತ್ತರ ಕೊಟ್ಟಿದ್ದಾರೆಂದು ನನ್ನನ್ನು ಕೇಳುತ್ತೀರಾ? ನಾನು ಉತ್ತರ ಕೊಟ್ಟಿಲ್ಲ. If he says he has answered, I cannot compel him to say anything further.

ಶ್ರೀ ಎಸ್. ಗೋಪಾಲಗೌಡ.—ಅವರು ಏನು ಉತ್ತರ ಕೊಟ್ಟಿದ್ದಾರೆಂಬುದನ್ನು ಬೇಕಾದರೆ ನಾನೇ ಹೇಳುತ್ತೇನೆ. ಅವರು ಮೊದಲು ಏನು ಹೇಳಿದರೋ ಅದನ್ನೇ ಮರ್ಯಾದೆಯಿಂದ ಮತ್ತೆ ಹೇಳಬೇಕು. ನಾನು ಹೀಗೆ ಹೇಳಿದ್ದೇನೆ. ಇದು ಉತ್ತರವೆಂದು ಇನ್ನೊಮ್ಮೆ ಹೇಳಬೇಕು.

Mr. SPEAKER.—I am not allowing any supplementaries. Next Question No. 11.